ದಿನಾಂಕ 03-11-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರಿದ ಪಾಟಿ ಸವಾಲು :** ಆರೋಪಿ ಪರ ಶ್ರೀ ಎನ್.ಆರ್.ಎನ್. ವಕೀಲರಿಂದಃ

17. ನನ್ನ ತಮ್ಮನ ಅಂಗಡಿ ನಾನು ಹೇಳಿದಂತ ಪ್ರಥಮ ಘಟನಾ ಸ್ಥಳದ ಪೂರ್ವ ದಿಕ್ಕಿನಲ್ಲಿದೆ. ಬಸ್ಸ್ ನಿಲ್ದಾಣ ಕೂಡ ಪೂರ್ವ ದಿಕ್ಕಿನಲ್ಲಿದೆ. ನಾನು ಹೇಳಿದಂತ ಕಾಲುದಾರಿ ಉತ್ತರ ದಿಕ್ಕಿನಲ್ಲಿದೆ. ಘಟನಾ ಸ್ಥಳದ ಉತ್ತರ ದಿಕ್ಕಿಗೆ ಆ ಕಾಲು ದಾರಿ ಬರುತ್ತದೆ. ಬಸ್ಸ್ ನಿಲ್ದಾಣದಿಂದ ಕಂಚಿನಬಾಗಿಲಿನ ದೇವಸ್ಥಾನ 300 ಮೀಟರ್ ದೂರದಲ್ಲಿದೆ. ಘಟನಾ ಸ್ಥಳದ ಪೂರ್ವ ದಿಕ್ಕಿಗೆ ಬ್ರಿಜ್ಜ್ ಬರುತ್ತದೆ. ಘಟನಾ ಸ್ಥಳದಿಂದ 50 ಮೀಟರ್ ದೂರದಲ್ಲಿ ಬ್ರಿಜ್ಜ್ ಇದೆ. ಘಟನಾ ಸ್ಥಳ ಹಾಗೂ ಬ್ರಿಜ್ಜ್ ನ ಮಧ್ಯೆ ಅಂಕೋಲಾದ ಖುರೇಶಿ ಎಂಬುವವರ ಜಮೀನು ಇದೆ. ಆ ಜಮೀನು ಆ ಕಾಲುದಾರಿಯ ಎರಡು ಬದಿಗೆ ಇದೆ. ಆ ಜಮೀನು 100 ಅಡಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದೆ. 50 ಮೀಟರ್ ಉದ್ದಕ್ಕೆ ಆ ಜಮೀನು ಉತ್ತರಕ್ಕೆ ಇದೆ. ನಾನು ಆ ಜಮೀನು ಖುರೇಶಿ ಜಮೀನು ಎಂದು ಪಂಚನಾಮೆ ಮಾಡುವಾಗ ಹೇಳಿಲ್ಲ.

18. ನಾನು ಸ್ಥಳದಲ್ಲಿ ಕೋವಿಗೆ ಮತ್ತು ಕತ್ತಿಗೆ ಸಹಿ ಮಾಡಿರುವ ಚೀಟಿ ಅಂಟಿಸಲು ಹೇಳಿಲ್ಲ. ನಾನು ನ್ಯಾಯಾಲಯದ ಮುಂದೆ ಮುಮಾಗಳಿಗೆ ಅಂಟಿಸಿರುವ ಚೀಟಿಗಳಲ್ಲಿ ಇರುವ ಸಹಿಗಳನ್ನು ಆರ್.ಎಫ್.ಒ. ಕಚೇರಿಯಲ್ಲಿ ಮಾಡಿರುವ ಸಹಿಗಳು. ಆರ್.ಎಫ್.ಒ.ರವರು ಆ ಚೀಟಿಗಳಿಗೆ ಎಷ್ಟು ಘಂಟೆಗೆ ಸಹಿ ಮಾಡಿದರು ಎಂದು ಗೊತ್ತಿಲ್ಲ. ನಾನು ಮತ್ತು ಉಳಿದ ಸಿಬ್ಬಂದಿಗಳು ಆ ಚೀಟಿಗಳಿಗೆ ಮದ್ಯಾಹ್ನ 12.30 ಘಂಟೆಗೆ ಆರ್.ಎಫ್.ಒ. ಕಚೇರಿಯಲ್ಲಿ ಸಹಿ ಮಾಡಿರುತ್ತೇವೆ. ಅವುಗಳಿಗೆ

ಆರೋಪಿಗಳ ಸಮಕ್ಷಮ ಸಹಿ ಮಾಡಿರುತ್ತೇವೆ. ನಮ್ಮ ಸಮಕ್ಷಮ ಆರ್.ಎಫ್.ಒ. ಅಥವಾ ತನಿಖಾಧಿಕಾರಿ ಆರೋಪಿಗಳ ಹೇಳಿಕೆಗಳನ್ನು ಪಡೆದಿರುವುದಿಲ್ಲ.

19. ನನಗೆ ಆ ಚೀಟಿಗಳಿಗೆ ನಾನು ಸಹಿ ಮಾಡಿದೆ ಎಂದು ಹೇಳುವ ಸಂದರ್ಭ ಫೋಟೋಗಳನ್ನು ತೋರಿಸಿಲ್ಲ. ನಾನು ಸಂಜೆ 4.00 ಘಂಟೆಗೆ ನ್ಯಾಯಾಲಯದಲ್ಲಿರುವ ಫೋಟೋಗಳನ್ನು ನೋಡಿರುತ್ತೇನೆ. ಕೋವಿಯನ್ನು ಲೋಡ್ ಮಾಡಿರುವುದನ್ನು ಇಕಳದ ರೀತಿಯ ಸಾಧನದಿಂದ ತೆಗೆದರು. ಕೋವಿಯನ್ನು ಕೆಳ ಮುಖ ಮಾಡಿ ಕಟ್ಟಿಗೆ ತುಂಡಿನಿಂದ ಬಡಿದಾಗ ಮದ್ದು ಕೆಳಗೆ ಬಿದ್ದಿರುತ್ತದೆ. ಮೊದಲು ಗುಂಡುಗಳನ್ನು ತೆಗೆದರು, ನಂತರ ಮದ್ದು ತೆಗೆದರು. ನಾನು ಹೇಳುವಂತ ಪಂಚನಾಮೆಯಲ್ಲಿ ಮೊದಲು ಗುಂಡುಗಳನ್ನು ತೆಗೆದರು, ನಂತರ ಮದ್ದು ತೆಗೆದರು ಎಂದು ಬರೆಯಲಾಗಿದೆಯಾ ಎಂದು ನನಗೆ ಗೊತ್ತಿಲ್ಲ. ಬಿದ್ದಿದೆ ಎಂದು ಹೇಳುವ ಗುಂಡುಗಳನ್ನು ಮತ್ತು ಮದ್ದುಗಳನ್ನು ನಾನು ಪರಿಶೀಲಿಸಲು ನನಗೆ ಹೇಳಿಲ್ಲ. ಬೆಳಿಗ್ಗೆ 10.30 ರಿಂದ 11.00 ಘಂಟೆಯ ಅವಧಿಯಲ್ಲಿ ಗುಂಡುಗಳನ್ನು ಮತ್ತು ಮದ್ದನ್ನು ತೆಗೆದರು. ಆರೋಪಿಗಳಿಗೆ ಅವುಗಳನ್ನು ತೋರಿಸಿದರಾ ಎಂದು ನನಗೆ ಗೊತ್ತಿಲ್ಲ. ಗುಂಡುಗಳನ್ನು ಮತ್ತು ಮದ್ದನ್ನು ತೆಗೆಯುವಾಗ ಆರೋಪಿಗಳು ಇರಲಿಲ್ಲ. ಅವುಗಳನ್ನು ತೆಗೆಯಲು ನನಗೆ ಫೋನ್ ಮಾಡಿ ಕರೆಸಿಕೊಂಡಿದ್ದರು. ಮೊದಲು ಕತ್ತವನ್ನು ತೆಗೆದು ನಂತರ ಗುಂಡುಗಳು ಮತ್ತು ಮದ್ದನ್ನು ತೆಗೆದರು. ಕತ್ತ, ಗುಂಡುಗಳು ಮತ್ತು ಮದ್ದನ್ನು ಮಿಕ್ಸ್ ಮಾಡಿದ್ದಾಗ ಅವುಗಳನ್ನು ತೆಗೆಯುವಾಗ ಗುಂಡುಗಳು ಮತ್ತು ಮದ್ದಿನಲ್ಲಿ ಕತ್ತದ ದೂಳು ಮತ್ತು ಚೂರುಗಳು ಇರುತ್ತದೆ ಎಂದರೆ ಸರಿ. ಕತ್ತದ ಗುಡದಿಯನ್ನು ಕೋವಿಗೆ ಮದ್ದು ಮತ್ತು ಗುಂಡು ತುಂಬುವಾಗ ತುಂಬಿ ಗಟ್ಟಿ

ಮಾಡಿರುತ್ತಾರೆ. ನಾನು ಆ ಕೋವಿಯಲ್ಲಿ ಮೇಲೆ ಹೇಳಿದಂತ ವಸ್ತುಗಳು ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳು ತುಂಬಿರುವುದನ್ನು ಆ ದಿನ ನೋಡಿಲ್ಲ. ಕತ್ತವನ್ನು ಏನು ಮಾಡಿದರು ಎಂದು ನಾನು ನೋಡಿಲ್ಲ. ನಾನು ನೋಡಿದಾಗ ಮದ್ದು ಮತ್ತು ಗುಂಡುಗಳನ್ನು ತೆಗೆದು ಪ್ಲಾಸ್ಟಿಕ್ ಕವರಿಗೆ ಹಾಕುವಾಗ ಕತ್ತ ನೆಲದಲ್ಲೆ ಬಿದ್ದಿತು. ಚಾಸಾ-1, ಚಾಸಾ-7, ಚಾಸಾ-2, ನಾನು ಹಾಗೂ ಡಿ.ಆರ್. ಪೊಲೀಸ್ ಆ ಸಂದರ್ಭದಲ್ಲಿ ಅಲ್ಲಿ ಹಾಜರಿದ್ದದ್ದು ಮಾತ್ರ. ಚಾಸಾ-10, ಚಾಸಾ-11 ಹಾಗೂ ಇತರ ಸಿಬ್ಬಂದಿಗಳು ಕಚೇರಿಯಲ್ಲಿದ್ದರು, ಆದರೆ ಬಂದೂಕು ಅನ್ ಲೊಡ್ ಮಾಡುವಲ್ಲಿ ಬಂದಿಲ್ಲ.

20. ದಿನಾಂಕ 29-09-2020 ರಂದು ನಮ್ಮನ್ನೆ ಬರಲು ಹೇಳಿದ್ದು. ಆಗ ನಾನು ಬಾಳೆಗುಳಿಯಲ್ಲಿ ಕೆಲಸ ಮಾಡುತ್ತಿದ್ದೆ. ಬೆಳಿಗ್ಗೆ 09.15 ಕ್ಕೆ ಆ ದಿನ ನನಗೆ ಬರಲು ಹೇಳಿದ್ದರು. ನಾನು ಬಾಳೆಗುಳಿಯಲ್ಲಿದ್ದು ನನ್ನನ್ನು ಕರೆದರು ಎಂದು ಹೇಳಿಕೆಯನ್ನು ನೀಡಿಲ್ಲ. ಬಂದೂಕಿನ ನಳಿಗೆಯ ಉದ್ದ ಹಾಗೂ ದಸ್ತಿನ ಉದ್ದ ಹಾಗೂ ಸುತ್ತಳತೆ ಬಗ್ಗೆ ಮಹಜರಿನಲ್ಲಿ ಹೇಳಿದ್ದಾರಾ ಎಂದು ನನಗೆ ಗೊತ್ತಿಲ್ಲ. ಬಂದೂಕು ಲೊಡೆಡ ಅಥವಾ ಅನ್ ಲೊಡೆಡಾ ಎಂದು ಖಾತ್ರಿ ಪಡಿಸಿದರಾ ಎಂದು ನನಗೆ ಗೊತ್ತಿಲ್ಲ. ಬಂದೂಕನ್ನು ನೋಡಿ ಡಿ.ಆರ್. ಪೊಲೀಸರು ಲೊಡ್ ಆಗಿದೆ ಎಂದು ಹೇಳಿದರು.

21. ನವಗದ್ದೆ ದೊಡ್ಡ ಅರಣ್ಯ ಪ್ರದೇಶವಾಗಿದ್ದು, ನಾನು ಅಲ್ಲೆ ವಾಸವಿರುವುದು ಎಂದರೆ ಸರಿ. ಆ ಅರಣ್ಯದಲ್ಲಿ ಹುಲಿ, ಚಿರತೆ, ಹಂದಿ, ಮುಳ್ಳು ಹಂದಿ, ಬರ್ಕಾ, ಕಡಾ ಮುಂತಾದ ಎಲ್ಲಾ ಪ್ರಾಣಿಗಳು ಇವೆ ಎಂದರೆ ಸರಿ. ಆದ್ದರಿಂದ ಅಂತಹ ಪ್ರಾಣಿಗಳು ಬೆಳೆನಾಶ ಮಾಡುವುದನ್ನು ತಡೆಯಲು ಅಂತಹ ಪ್ರಾಣಿಗಳನ್ನು ಬೇಟೆಯಾಡುವ ಅನುಭವ ನನಗಿದೆ ಎಂದರೆ ಸರಿಯಲ್ಲ. ಅಂತಹ ಬೇಟೆಯನ್ನು ಮಾಡಿ

ಸ್ವತಹಃ ಅನುಭವ ಹೊಂದಿರುವ ವ್ಯಕ್ತಿ ನಾನು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಬಂದೂಕು ಅನ್ ಲೊಡ್ ಮಾಡದೆ ಇದ್ದರೂ ಕೂಡ ನನಗೆ ಬಂದೂಕಿನಿಂದ ಬೇಟೆಯಾಡುವ ಅನುಭವ ಇದ್ದುದ್ದರಿಂದ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಪೂರಕ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಬಂದೂಕಿನಿಂದ ಫೈರ್ ಆಗಬೇಕಾದರೆ ಮದ್ದು ಗುಂಡುಗಳು ಮತ್ತು ಕತ್ತ ಹೊರತುಪಡಿಸಿ ಬೇರೆ ಏನು ವಸ್ತುಗಳು ಬೇಕಾಗುತ್ತದೆ ಎಂದು ಗೊತ್ತಿಲ್ಲ. ನಾನು ಹಾಗೂ ಚಾಸಾ-2 ಹಾಗೂ ಅರಣ್ಯ ಸಿಬ್ಬಂದಿಗಳು ಮದ್ದು ಗುಂಡು ಮತ್ತು ಕತ್ತವನ್ನು ಹೊರತುಪಡಿಸಿ ಬೇರೆ ವಸ್ತುಗಳು ಫೈರ್ ಮಾಡಲು ಅವಶ್ಯಕತೆ ಇದೆಯಾ ಎಂದು ಕೇಳಿಲ್ಲ. ಪಂಚನಾಮೆಯಲ್ಲಿ ಬಂದೂಕು ಲೊಡೆಡ್ ಆಗಿದೆ ಎನ್ನುವ ಸಂದರ್ಭದಲ್ಲಿ ಹಾಗೂ ಅನ್ ಲೊಡೆಡ್ ಆಗಿದೆ ಎನ್ನುವ ಸಂದರ್ಭದಲ್ಲಿ ಯಾವ ಸ್ಥಿತಿಯಲ್ಲಿ ಇತ್ತು ಎಂದು ಪಂಚನಾಮೆಯಲ್ಲಿ ಹೇಳಿಲ್ಲ.

22. ಬಂದೂಕಿನ ನಳಿಗೆಯ ಮುಂದಿನ ಭಾಗದ ಒಳಗಡೆ ಕಾರ್ಬನಿಕೃತವಾಗಿ ಇತ್ತಾ ಹಾಗೂ ತುಕ್ಕು ಹಿಡಿದ ಸ್ಥಿತಿಯಲ್ಲಿ ಇತ್ತಾ ಎಂದು ಪಂಚನಾಮೆಯಲ್ಲಿ ಹೇಳಿಲ್ಲ. ನನ್ನ ಸಮಕ್ಷಮದಲ್ಲಿ ಬಂದೂಕನ್ನು ವಶಪಡಿಸಿಕೊಂಡರು ಎಂದು ಹೇಳುವ ಸಂದರ್ಭದಲ್ಲಿ ಬಂದೂಕು ಲೊಡ್ ಆಗಿತ್ತಾ ಅಥವಾ ಇಲ್ಲವಾ ಎಂದು ಪರಿಶೀಲಿಸಿರುವುದಿಲ್ಲ. ಅನ್ ಲೊಡ್ ಮಾಡಿದ್ದಾರೆ ಎಂದು ಹೇಳುವ ಸಂದರ್ಭದಲ್ಲಿ ಗುಂಡುಗಳು ಯಾವ ಸೈಜ್‌ನವು ಎಂದು ಪಂಚನಾಮೆಯಲ್ಲಿ ಹೇಳಿಲ್ಲ. ಸಾಕ್ಷಿ ಸ್ವತಹಃ ನಾನು ನೋಡಿದಂತ ಗುಂಡುಗಳು ತಲಾ ಒಂದರಂತೆ ಮಾತ್ರ ನ್ಯಾಯಾಲಯದ ಮುಂದೆ ಇರುವ ಬಂದೂಕಿನ ನಳಿಗೆಯಲ್ಲಿ ತೂರಿಸಲಾಗುತ್ತದೆ. 4 ಗುಂಡುಗಳು ಇತ್ತು. ಆ ಗುಂಡುಗಳ ಸೈಜ್ ಬಗ್ಗೆ ಕೇಳಿದಾಗ ಸಾಕ್ಷಿ

ಅರ್ದ ಇಂಚು ಸೈಜು ಎಂದು ಹೆಬ್ಬೆರಳು ಮತ್ತು ತೊರುಬೆರಳಗಳ ಮೂಲಕ ಸೈಜನ್ನು ತೋರಿಸಿ ಹೇಳಿರುತ್ತಾರೆ. ನಾನು ಹೇಳಿದಂತ ಆ ದಿನ ಆ ಬಂದೂಕಿನ ಬಳಿ ಹೋದಾಗ ಆ ಬಂದೂಕಿನ ನಳಿಗೆಯಿಂದ ವಾಸನೆ ಬಂದಿಲ್ಲ. ಡಿ.ಆರ್. ಪೊಲೀಸ್ ಆಗಲಿ ಸಿಬ್ಬಂದಿಗಳಾಗಲಿ ಕೂಡ ವಾಸನೆ ಬರುತ್ತಿತ್ತು ಎಂದು ಹೇಳಿಲ್ಲ.

23. ನಾನು ಹೇಳಿದ ಕಾಯಿಕತ್ತ ಕಂದು ಬಣ್ಣದಾಗಿತ್ತು. ಆ ಬಣ್ಣ ತೆಂಗಿನಕಾಯಿ ಸಿಪ್ಪೆಯ ಒಳ ಭಾಗದ ಬಣ್ಣ ಹೇಗಿರುತ್ತದೆ, ಅದೇ ಬಣ್ಣದ್ದಾಗಿತ್ತು. ಆ ಕಾಯಿಯು ಸಿಪ್ಪೆಯಲ್ಲಿದ್ದಾಗ ಯಾವ ಬಣ್ಣದಿತ್ತು ಅದೇ ಬಣ್ಣದಲ್ಲಿ ಆ ಕತ್ತ ಇತ್ತು. ಬಂದೂಕಿನಿಂದ ಫೈರ್ ಮಾಡಿ ನಂತರ ಪುನಹಃ ಮದ್ದು ಗುಂಡುಗಳನ್ನು ಕಾಯಿಕತ್ತದ ಜೊತೆಗೆ ತುಂಬಿದಾಗ ನಳಿಗೆಯಲ್ಲಿದ ಕಾರ್ಬನ್ ಕತ್ತಕ್ಕೂ ಮೆತ್ತಿ ಕತ್ತ ಕಪ್ಪು ಬಣ್ಣಕ್ಕೆ ತಿರುಗಿರುತ್ತದೆ ಎಂದರೆ ಸರಿ. ನನ್ನ ಮೇಲಾಧಿಕಾರಿಗಳು ಸೃಷ್ಟಿಸಿದ ಕಟ್ಟು ಕತೆಯ ಒಂದು ಪ್ರಕರಣ ಹಾಗೂ ಮುದ್ದೆ ಮಾಲುಗಳಿಗೆ ಪೂರಕವಾಗಿ ನಾನು ಅವರ ಇಲಾಖೆಯಲ್ಲಿ ದಿನಗೂಲಿ ನೌಕರನಾಗಿ ಕೆಲಸ ಮಾಡುವುದರಿಂದ ನಾನು ಸುಳ್ಳು ಸಾಕ್ಷಿಯನ್ನು ಅವರ ಮುಲಾಜಿನಲ್ಲಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತ 1 ನೇ ಹಾಗೂ 2 ನೇ ಘಟನಾ ಸ್ಥಳಕ್ಕೆ ಹೋದದ್ದೆ ಇಲ್ಲ ಹಾಗೂ ಆರೋಪಿಗಳನ್ನು ಅಲ್ಲಿ ಬಂಧಿಸಿದ್ದೆ ಇಲ್ಲ ಹಾಗೂ ಇಲಾಖೆಯಲ್ಲಿ ಸೃಷ್ಟಿಸಿದ ಕಥೆಗೆ ಪೂರಕರವಾಗಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಮುದ್ದೆ ಮಾಲುಗಳನ್ನು ಇಲಾಖೆಯಲ್ಲಿ ಸೃಷ್ಟಿಸಿಕೊಂಡಿರುವುದು ನನಗೆ ಗೊತ್ತಿದ್ದರೂ ನಾನು ಇಲಾಖೆಯ ಮುಲಾಜಿನಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ನವಗದ್ದೆ, ಅಡ್ಲೂರು, ಅಗಸೂರು ಹಾಗೂ ಹೆಬ್ಬುಳ ಮುಂತಾದ ಅರಣ್ಯ ಪ್ರದೇಶಗಳಲ್ಲಿ ಅವ್ಯಹತವಾಗಿ ಬೇಟೆ ನಡೆಯುತ್ತಿತ್ತು ಎಂದು ಪತ್ರಿಕಾ ಪ್ರಕಟಣೆಗಳು ಬರುತ್ತಿದ್ದದ್ದು ನನಗೆ ಗೊತ್ತಿತ್ತು. ಗರ್ಬಿಣಿ ಕಡವೆ ಅಥವಾ ಇತರ ಪ್ರಾಣಿಗಳು ಗರ್ಭದಲ್ಲಿರುವ ಮರಿ ತಿರುವುದರಿಂದ ಕೂಡ ಮೃತಪಡುವ ಸಂದರ್ಭ ಇದೆ. ಆ ರೀತಿ ಬೇಟೆಗಳು ಅರಣ್ಯ ಇಲಾಖೆಯವರ ಸುಪರ್ದಿಯಲ್ಲಿಯೇ ನಡೆಯುತ್ತಿತ್ತು ಎಂದು ಪ್ರಕಟಣೆಗಳು ಬಂದಿದೆ ಎಂದರೆ ಸರಿಯಲ್ಲ. ಕಂಚಿನಬಾಗಿಲು ಮುಖಾಂತರ 1ನೇ ಆರೋಪಿಯನ್ನು ಹಿಡಿಯಲು ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರಿ ತಿರುವು ಹಾಕಿ ಮೃತಪಟ್ಟ ಕಡವೆಯನ್ನು ಅರಣ್ಯ ಇಲಾಖೆಯವರ ವಿರುದ್ಧ ಅಕ್ರಮ ಬೇಟೆಯ ಸಹಕಾರದ ಆಪಾದನೆಯನ್ನು ತಪ್ಪಿಸಲು ಉಪಯೋಗಿಸಿ ಈ ಸುಳ್ಳು ಪ್ರಕರಣವನ್ನು ಆರೋಪಿಗಳು ವಿರುದ್ಧ ನಮ್ಮ ಸಹಾಕರದಿಂದ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮುದ್ದೆ ಮಾಲುಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತ ಎಲ್ಲಾ ಸಂಗತಿಗಳು ಸುಳ್ಳು ಸಂಗತಿಗಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.